ಕರ್ನಾಟಕ ವಿಧಾನಸಭೆ

ಬುಧವಾರ 22ನೇ ನವೆಂಬರ್ 2000ದಂದು ಸದನವು ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 11 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಎಂ.ವಿ. ವೆಂಕಟಪ್ಪ ಅವರು) ಪೀಠವನ್ನು ಅಲಂಕರಿಸಿದ್ದರು.)

(1) ಪ್ರಶ್ನೋತ್ತರ

(ಅ) ತಡಹಿಡಿಯಲಾದ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ಬೆಂಗಳೂರು ನಗರದಲ್ಲಿ ಹೊಸದಾಗಿ ನರ್ಸಿಂಗ್ ಶಾಲೆಯನ್ನು ಪ್ರಾರಂಭಿಸುವುದು.

529(5004) ಶ್ರೀ ರಾಮಲಿಂಗಾರೆಡ್ಡಿ (ಜಯನಗರ) :— ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಹೊಸದಾಗಿ ನರ್ಸಿಂಗ್ ಶಾಲೆಯನ್ನು ತೆರೆಯಲು ಸರ್ಕಾರ ನಿರ್ಧರಿಸಿದೆಯೆ;

ಆ) ಸರ್ಕಾರ ಹೊಸದಾಗಿ ನರ್ಸಿಂಗ್ ಶಾಲೆಗಳನ್ನು ತೆರೆಯಲು ಈಗಿರುವ ನಿರ್ಬಂಧವನ್ನು ರದ್ದುಗೊಳಿಸಿ, ಖಾಸಗಿ ಸಂಸ್ಥೆಗಳಿಗೆ ಸದರಿ ಶಾಲೆಗಳನ್ನು ತೆರೆಯಲು ಅನುಮತಿ ನೀಡುವುದೆ?

ಡಾ: ಎ.ಬಿ. ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :—

ಅ) ಇಲ್ಲ.

ಆ) ರಾಜ್ಯದಲ್ಲಿ ಅಸ್ತಿತ್ವದಲ್ಲಿರುವ ಒಟ್ಟು 154 ನರ್ಸಿಂಗ್ ಶಾಲೆಗಳ ಪೈಕಿ ಬೆಂಗಳೂರು ವಿಭಾಗದಲ್ಲಿ 80 ಹಾಗೂ ಮೈಸೂರು ವಿಭಾಗದಲ್ಲಿ 36 ನರ್ಸಿಂಗ್ ಶಾಲೆಗಳು ಇರುತ್ತವೆ. ರಾಜ್ಯದಲ್ಲಿ ಅಸ್ತಿತ್ವದಲ್ಲಿರುವ ಬಹುತೇಕ ನರ್ಸಿಂಗ್ ಶಾಲೆಗಳು ಬೆಂಗಳೂರು ಹಾಗೂ ಮೈಸೂರು ಕಂದಾಯ ವಿಭಾಗಗಳಲ್ಲಿ 1998ರಿಂದ ಜಾರಿಗೆ ಬರುವಂತೆ 5 ವರ್ಷಗಳ ಅವಧಿಯವರೆಗೆ ಹೊಸದಾಗಿ ನರ್ಸಿಂಗ್ ಶಾಲೆ ತೆರೆಯುವುದನ್ನು ಸರ್ಕಾರವು ನಿಷೇಧಿಸಿದೆ. ಆದರೆ ಈ ನಿಷೇದವು ಬೆಳಗಾವಿ, ಮತ್ತು ಗುಲ್ಬರ್ಗಾ ವಿಭಾಗಗಳಿಗೆ ಅನ್ವಯಿಸುವುದಿಲ್ಲ. ಆದುದರಿಂದ ಹೊಸದಾಗಿ ನರ್ಸಿಂಗ್ ಶಾಲೆಗಳನ್ನು ತೆರೆಯಲು ಈಗಿರುವ ನಿರ್ಬಂದವನ್ನು ರದ್ದುಗೊಳಿಸಲಾಗುವುದಿಲ್ಲ.

ಶ್ರೀ ರಾಮಲಿಂಗಾರೆಡ್ಡಿ :— ಮಾನ್ಯ ಅಧ್ಯಕ್ಷರೆ, ನಾನು ಕೇಳಿರುವ ಪ್ರಶ್ನೆಗಳಿಗೆ ಮಾನ್ಯ ಸಚಿವರು ಉತ್ತರ ಕೊಟ್ಟಿದ್ದು, ಉತ್ತರದಲ್ಲಿ ಬೆಂಗಳೂರು ಮತ್ತು ಮೈಸೂರು ವಿಭಾಗಗಳಲ್ಲಿ ಹೊಸದಾಗಿ ನರ್ಸಿಂಗ್ ಶಾಲೆಗಳನ್ನು ತೆರೆಯುವುದನ್ನು ಸರ್ಕಾರ ನಿಷೇಧಿಸಿದೆಯೆಂದು ಹಾಗೂ ಬೆಳಗಾವಿ ಮತ್ತು ಗುಲ್ಬರ್ಗ ವಿಭಾಗಗಳಿಗೆ ಈ ನಿಷೇಧ ಅನ್ವಯಿಸುವುದಿಲ್ಲವೆಂದಿದ್ದಾರೆ. ಈಗಾಗಲೇ ಬೆಂಗಳೂರು ಮತ್ತು ಮೈಸೂರು ವಿಭಾಗಗಳಲ್ಲಿರುವ ನರ್ಸಿಂಗ್ ಶಾಲೆಗಳಲ್ಲಿ ಇನ್‌ಟೇಕ್ ಸೀಟುಗಳು 30 ಇದ್ದರೆ 60 ಹಾಗೂ 60 ಇದ್ದರೆ 90 ಸೀಟುಗಳಂತೆ ತೆಗೆದುಕೊಳ್ಳುತ್ತಿದ್ದಾರೆ. ಪರಿಸ್ಥಿತಿ ಹೀಗಿರುವಾಗ ಒಳ್ಳೆಯ ನರ್ಸಿಂಗ್ ಶಾಲೆಗಳನ್ನು ತೆರೆಯುತ್ತೇವೆಂದು ಖಾಸಗಿಯವರು ಯಾರಾದರೂ ಮುಂದೆ ಬಂದರೆ ಅದಕ್ಕೆ ಅನುಮತಿ ಕೊಡಬಹುದೆಂಬುದು ನನ್ನ ಅಭಿಪ್ರಾಯವಾಗಿದೆ. ಇದಕ್ಕೆ ನಾನು ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ ಬಯಸುತ್ತೇನೆ.

ಶ್ರೀಮತಿ ನಫೀಜಾ ಫಜಲ್ ವೈದಕೀಯ ಶಿಕ್ಷಣ ರಾಜ್ಯ ಸಚಿವರು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಪರವಾಗಿ) :— ಮಾನ್ಯ ಅಧ್ಯಕ್ಷರೆ, ಈಗ ರಾಜ್ಯದಲ್ಲಿ ಒಟ್ಟಾರೆ 7,065 ನರ್ಸಿಂಗ್ ಸೀಟುಗಳಿದ್ದು, ಈ ಪೈಕಿ ಬೆಂಗಳೂರು ವಿಭಾಗದಲ್ಲಿ 3,797 ಹಾಗೂ ಮೈಸೂರು ವಿಭಾಗದಲ್ಲಿ 1,570 ನರ್ಸಿಂಗ್ ಸೀಟುಗಳಿವೆ. That means it makes up more than 40%of the total nursing seats in Karnataka State. ಬೆಳಗಾಂ ಹಾಗೂ ಗುಲ್ಬರ್ಗಾ ಜಿಲ್ಲೆಗಳು ಹಿಂದುಳಿದ ಪ್ರದೇಶದಲ್ಲಿರುವುದರಿಂದ ಅಲ್ಲಿ ನಾವು ಅನುಮತಿಯನ್ನು ಕೊಡುತ್ತಿದ್ದೇವೆ. 1998ರಲ್ಲಿ ಹಿಂದಿನ ಸರ್ಕಾರ ಏನು 5 ವರ್ಷಕ್ಕೆ ಹಾಕಿದ್ದಾರೆ, ಇದನ್ನು ಇನ್ನೂ ನಾವು ಪರಿಶೀಲನೆ ಮಾಡಿಲ್ಲ. ನೀವು ಇಂಟೇಕ್ ಕೊಡುತ್ತೀರಾ ಎಂದು ಮಾನ್ಯ ಸದಸ್ಯರು ಪ್ರಶ್ನೆ ಮಾಡಿದರು. According to the State Government, intake increase or reduction is upto the government. If there is a demand we increase the seats. If there is no demand, the state government has got authority to reduce the intake. So, there will be no financial loss. ಮಾನ್ಯ ಸದಸ್ಯರು ಈಗ ಈ ವಿಷಯವನ್ನು ನಮ್ಮ ಗಮನಕ್ಕೆ ತಂದಿದ್ದಾರೆ, ಪರಿಶೀಲನೆ ಮಾಡುತ್ತೇವೆ.

ಶ್ರೀ ರಾಮಲಿಂಗಾರೆಡ್ಡಿ :— ಮೈಸೂರು ಹಾಗೂ ಬೆಂಗಳೂರಿನಲ್ಲಿ ನಿಷೇಧಿಸಿದ್ದಾರೆ ಒಪ್ಪಿಕೊಳ್ಳೋಣ ಆದರೆ ಇಂಟೇಕ್ ಜಾಸ್ತಿ ಏತಕ್ಕೆ ಮಾಡುತ್ತೀರಿ, ಅದನ್ನು ಮಾಡಬೇಡಿ.

ಶ್ರೀಮತಿ ನಫೀಜ ಫಜಲ್ :— ನಾನು ಸ್ಪಷ್ಟವಾಗಿ ಹೇಳಿದ್ದೇನೆ, government has got power to increase the intake of seats if there is demand. If there is no demand we can reduce. This Government Order was

issued in 1998. ಇದು ಈಗ ನಮ್ಮ ಗಮನಕ್ಕೆ ಬಂದಿದೆ ಏನು ಮಾಡಲು ಸಾಧ್ಯವೆಂಬುದನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀ ವಿ. ಪಾಪಣ್ಣ :— ಆಸ್ಪತ್ರೆಗಳಲ್ಲಿ ಇರುವ ಹಾಸಿಗೆಗಳಿಗೆ ಅನುಸಾರವಾಗಿ ನರ್ಸಿಂಗ್ ಶಾಲೆಗಳಲ್ಲಿ ಹೆಚ್ಚಿಗೆ ಸೀಟನ್ನು ಕೊಡಲಾಗುವುದು ಈ ವಿಭಾಗ ಆ ವಿಭಾಗವೆಂದು ಕೊಡಲಾಗುವುದಿಲ್ಲ. ಅಲ್ಲಿ ಆಸ್ಪತ್ರೆ ಕಮ್ಮಿ ಇದ್ದು, ಹಾಸಿಗೆಗಳು ಕಮ್ಮಿ ಇದ್ದು, ಅಲ್ಲಿ ನರ್ಸಿಂಗ್ ಓದಿ ಏನು ಮಾಡುವುದು? ಮೂರು ವರ್ಷ ಆಸ್ಪತ್ರೆ ನರ್ಸಿಂಗ್ ಸರ್ವೀಸ್ ಇದೆ, ಅದಕ್ಕೋಸ್ಕರ ನರ್ಸಿಂಗ್ ಶಾಲೆಯನ್ನು ತೆಗೆಯುವುದು ಆಸ್ಪತ್ರೆಗಳೇ ಇಲ್ಲದಿದ್ದರೆ ನರ್ಸಿಂಗ್ ಅನ್ನು ಹೇಗೆ ಅವರು ಕಲಿಯುತ್ತಾರೆ? ಎಲ್ಲಿ ಆಸ್ಪತ್ರೆ ಇರುತ್ತದೆಯೋ ಅಲ್ಲಿ ನರ್ಸಿಂಗ್ ಶಾಲೆಗೆ ಅನುಮತಿ ಕೊಡಬೇಕು, ಇದರ ಬಗ್ಗೆ ಮಂತ್ರಿಗಳು ತಮ್ಮ ಉತ್ತರ ಹೇಳಬೇಕೆಂದು ಕೇಳುತ್ತೇನೆ.

ಶ್ರೀಮತಿ ನಫೀಜ ಫಜಲ್ :— ನಾನು ಸ್ಪಷ್ಟವಾಗಿ ಹೇಳಿದ್ದೇನೆ, ಹಿಂದಿನ ಸರ್ಕಾರ ಇದನ್ನು ನಿಷೇಧಿಸಿದ್ದರು, ಇದನ್ನು ಪರಿಶೀಲನೆ ಮಾಡುತ್ತೇವೆ. Third year nursing students are being utilised in hospitals. ತಾವು ಸರಿಯಾಗಿ ಹೇಳುತ್ತಿದ್ದೀರಿ, ಈಗ ಇದು ನಮ್ಮ ಗಮನಕ್ಕೆ ಬಂದಿದೆ, ಪರಿಶೀಲಿಸಿ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ವಿ. ಪಾಪಣ್ಣ :— ಬಹಳ ಕಡೆ ಆಸ್ಪತ್ರೆಗಳಲ್ಲಿ ನರ್ಸಿಂಗ್ ಕೊರತೆ ಇದ್ದು ತೊಂದರೆಯಾಗಿದೆ. ನಾನು ಕೂಡ ಕೆಂಪೇಗೌಡ ಮೆಡಿಕಲ್ ಕಾಲೇಜಿನಲ್ಲಿ ನಿರ್ದೇಶಕನಾಗಿ 10-15ವರ್ಷ ಕೆಲಸ ಮಾಡಿದ್ದೇನೆ. ಹಿಂದಿನ ಸರ್ಕಾರದವರು ಮಾಡಿದ್ದನ್ನು ಮುಂದಿನ ಸರ್ಕಾರದವರು ಮುಂದುವರೆಸುವ ಅಗತ್ಯವಿಲ್ಲ, ಇದು ತಮ್ಮ ಗಮನಕ್ಕೆ ಬಂದಿದೆ, ದಯಮಾಡಿ ನರ್ಸಿಂಗ್ ಶಾಲೆಗೆ ಅವಕಾಶ ಮಾಡಿಕೊಡಬೇಕೆಂದು ಮಂತ್ರಿಗಳಿಗೆ ಮನವಿ ಮಾಡುತ್ತೇನೆ.

ಶ್ರೀ ರಾಮಲಿಂಗರೆಡ್ಡಿ :— ನರ್ಸಿಂಗ್ ಕಲಿತವರಿಗೆ ನಿರುದ್ಯೋಗದ ತೊಂದರೆ ಇದುವರೆಗೆ ಇಲ್ಲ; ಆದುದರಿಂದ ನಿಷೇಧವನ್ನು ತೆಗೆಯಬಹುದು.

ಶ್ರೀಮತಿ ನಫೀಜ ಫಜಲ್ :— ಒಟ್ಟಾರೆ ನಮ್ಮ ರಾಜ್ಯದಲ್ಲಿ ಡಿಪ್ಲಾಮೊ ಮತ್ತು ಪಿಎಸ್‌ಸಿ ಸೇರಿ 1100 ಸೀಟುಗಳಿವೆ, ತಾವು ಹೇಳಿರುವುದು ನಮ್ಮ ಗಮನಕ್ಕೆ ಬಂದಿದೆ, ಪರಿಶೀಲನೆ ಮಾಡುತ್ತೇವೆ.

ಶ್ರೀ ಎ.ಎಸ್. ಗುರುಸ್ವಾಮಿ :— ಎಷ್ಟು ಅನುಪಾತದಲ್ಲಿ ಈಗಿರುವ ಮೆಡಿಕಲ್ ಕಾಲೇಜುಗಳ ಇಂಟೇಕ್‌ಗೆ ಅನುಸಾರವಾಗಿ, ಇರತಕ್ಕಂಥ ನರ್ಸಿಂಗ್ ಶಾಲೆಗಳನ್ನು ತೆರೆದಿದ್ದಾರೆಂಬುದನ್ನು ಸದನಕ್ಕೆ ತಿಳಿಸಬೇಕೆಂದು ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀಮತಿ ನಫೀಜ ಫಜಲ್ :— ನಮ್ಮ ರಾಜ್ಯದಲ್ಲಿ 22 ಮೆಡಿಕಲ್ ಕಾಲೇಜುಗಳಿವೆ, 11 ಸರ್ಕಾರಿ ನರ್ಸಿಂಗ್ ಶಾಲೆಗಳು, 143 ಖಾಸಗಿ ನರ್ಸಿಂಗ್ ಶಾಲೆಗಳಿವೆ.

SRI A.S. Guruswamy :— What is the ratio? How it is equal to intake in the nursing schools?

ಶ್ರೀಮತಿ ನಫೀಜ ಫಜಲ್ :— ಆ ಮಾಹಿತಿ ನಮ್ಮಲ್ಲಿ ಈಗ ಇಲ್ಲ. Ratio has to be worked out.

ಚಾಮರಾಜನಗರ ತಾಲ್ಲೂಕಿನಲ್ಲಿ ಪಡಿತರ ಚೀಟಿಗಳ ಬದಲಾವಣೆ.

592(5713) ಶ್ರೀ ಸಿ. ಗುರುಸ್ವಾಮಿ (ಚಾಮರಾಜನಗರ) :— ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಾಮರಾಜನಗರ ತಾಲ್ಲೂಕು ಕಿಲಗೆರೆ ಗ್ರಾಮದ ನ್ಯಾಯಬೆಲೆ ಅಂಗಡಿ ಮಾಲೀಕರುಗಳು ನೂರಾರು ಹಸಿರು ಕಾರ್ಡುಗಳನ್ನು ತಿದ್ದಿ ಹಳದಿ ಕಾರ್ಡುಗಳನ್ನಾಗಿ (ಕಾರ್ಡ್ ಪರಿವರ್ತನೆ ಮಾಡಿ) ಮಾರ್ಪಡಿಸಿ ಫಲಾನುಭವಿಗಳಿಗೆ ಆಹಾರ ವಿತರಣೆಯನ್ನು ಕಡಿಮೆ ಪ್ರಮಾಣದಲ್ಲಿ ಹಂಚಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಕಾರ್ಡುಗಳನ್ನು ಪರಿವರ್ತನೆಮಾಡಲು ಕಾರಣಗಳೇನು?

ಇ) ಇದರಿಂದ ಅಧಿಕೃತವಾಗಿ ಪಡೆದ ಹಸಿರು ಕಾರ್ಡುದಾರರಿಗೆ ಅನ್ಯಾಯವಾದಂತಾಗಿಲ್ಲವೇ?

ಈ) ಅನಧಿಕೃತ ಕಾರ್ಡುಗಳನ್ನು ಮಾರ್ಪಡಿಸಿದ ತಪ್ಪಿತಸ್ಥರುಗಳು ಯಾರುಯಾರು? ಇವರುಗಳ ಮೇಲೆ ಸರ್ಕಾರ ಶಿಸ್ತಿನ ಕ್ರಮವನ್ನು ಜರುಗಿಸಲಾಗುವುದೇ?

ಶ್ರೀ ಡಿ.ಬಿ. ಇನಾಂದಾರ್ (ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು) :—

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.